# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಶ್ರೀನಿವಾಸಪುರ

## ಸಿ.ಸಿ.1605/2023

**ಪಿರ್ಯಾದುದಾರರು:** ರಾಜ್ಯಪರ ಶ್ರೀನಿವಾಸಪುರ ಪೊಲೀಸರು

ವಿರುದ್ಧ

**ಆರೋಪಿ** : ಶಶಿಕುಮಾರ್ ಬಿನ್ ಸಂಪಂಗಿ ರಾಮಯ್ಯ, 34 ವರ್ಷ,
ವಾಸಃ ಸೋಮಯಾಜಲಹಳ್ಳಿ ಗ್ರಾಮ,
ಶ್ರೀನಿವಾಸಪುರ ತಾಲ್ಲೂಕು.

## ದಂ. ಪ್ರ. ಸಂ. ಕಲಂ 313 ರಡಿ ಆರೋಪಿತನ ಹೇಳಿಕೆ

ಪ್ರಶ್ನೆ **:1:** ಈ ಪ್ರಕರಣದಲ್ಲಿ ಅಬಿಯೋಜಕರು ವಿಚಾರಣೆ ಮಾಡಿದ ಸಾಕ್ಷಿಗಳ ಹೇಳಿಕೆಯನ್ನು ಕೇಳಿ ಅರ್ಥ ಮಾಡಿಕೊಂಡಿರುವಿರಾ**?**

ಉತ್ತರಃ

ಪ್ರಶ್ನೆ **:2:** ಪ್ರಾಸಾ.1 ಆಶಾ.ಎಸ್. ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 09.03.2014 ರಂದು ಶ್ರೀನಿವಾಸಪುರದಲ್ಲಿ ತನ್ನ ಹಾಗೂ ಆರೋಪಿಯ ಮದುವೆಯಾಗಿದ್ದು, ಮದುವೆಯ ನಂತರ ತಾನು 4 ತಿಂಗಳು ಅತ್ತೆ ಮಾವನೊಂದಿಗೆ ಸೋಮಯಾಜಲಹಳ್ಳಿಯಲ್ಲಿ ವಾಸವಿದ್ದು, ನಂತರ ಶಿಡ್ಲಘಟ್ಟ ತಾಲ್ಲೂಕಿನ ಮಳ್ಳೂರಿನಲ್ಲಿ 7 ವರ್ಷಗಳು ವಾಸವಿದ್ದೆವು ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ **:3:** ಪ್ರಾ.ಸಾ.1 ರವರು ಮುಂದುವರೆದು ದೂರು ನೀಡಿದ 1 ವರ್ಷದ ಮೊದಲು ಅಂದರೆ 2022 ರಲ್ಲಿ ಆರೋಪಿಯು ದೀಪಿಕ ಪಲ್ಲವಿ ಎಂಬುವವರೊಂದಿಗೆ ಸಾಮಾಜಿಕ ಜಾಲತಾಣದಲ್ಲಿ ಪರಿಚಿತವಾಗಿ ಅವರೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿರುವ ಬಗ್ಗೆ ತನಗೆ ಗೊತ್ತಾಗಿ, ತಾನು ಆರೋಪಿಯನ್ನು ವಿಚಾರಿಸಿದಾಗ ಇನ್ನು ಮುಂದೆ ಈ ರೀತಿ ಅಕ್ರಮ ಸಂಬಂಧ ಬೆಳೆಸುವುದಿಲ್ಲ ಎಂದು ಹೇಳಿ ತನ್ನೊಂದಗೆ ವಾಸವಿರಲು ಕೇಳಿಕೊಂಡಿದ್ದರು ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ :4: ಪ್ರಾ.ಸಾ.1 ರವರು ಮುಂದುವರೆದು ತಾನು ತನ್ನ ಅತ್ತೆ ಮತ್ತು ಮಾವನವರಿಗೆ ಹಾಗೂ ತನ್ನ ಕುಟುಂಬದವರಿಗೆ ಈ ರೀತಿಯ ಅಕ್ರಮ ಸಂಬಂಧದ ಬಗ್ಗೆ ತಿಳಿಸಿದ್ದು, ಆ ಬಗ್ಗೆ ಕುಟುಂಬದ ನಡುವೆ ರಾಜೀ ಸಂದಾನ ನಡೆದಿತ್ತು, ದಿನಾಂಕಃ 10.01.2023 ರಂದು ಶ್ರೀನಿವಾಸಪುರದಲ್ಲಿ ತನ್ನ ಅತ್ತೆ ಮನೆಯಲ್ಲಿ ತಮ್ಮ ಕುಟುಂಬದ ಹಿರಿಯರ ಸಮಕ್ಷಮ ಈ ಬಗ್ಗೆ ರಾಜೀ ಸಂದಾನ ನಡೆಯುತ್ತಿದ್ದಾಗ ಆರೋಪಿಯು ತನಗೆ ಕೈಗಳಿಂದ ಹೊಡೆದು, ಮೊಬೈಲ್ ಚಾರ್ಜಿಂಗ್ ವೈರ್ ನಿಂದ ಹಲ್ಲೆ ಮಾಡಿರುತ್ತಾನೆ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ :5: ಪ್ರಾ.ಸಾ.1 ರವರು ಮುಂದುವರೆದು ನಂತರ ಆರೋಪಿಯು ಅಲ್ಲಿಂದ ತಾನು ಕಾನಮಾನಹಳ್ಳಿಗೆ ಹೋಗಬೇಕೆಂದು ಹೇಳಿ ತನ್ನನ್ನು ರಸ್ತೆಯಲ್ಲೇ ಬಿಟ್ಟು ಹೊರಟಿದ್ದ, ಆಗ ತಾನು ಅಲ್ಲಿಂದ ತನ್ನ ತಾಯಿಯ ಮನೆಗೆ ಹೋಗಿದ್ದು, ದಿಃ13.01.2023 ರಂದು ಆರೋಪಿಯು ತನಗೆ ಫೋನ್ ಮಾಡಿ ನಿನ್ನೊಂದಿಗೆ ಇನ್ನು ಮುಂದೆ ಜೀವನ ಮಾಡುವುದಿಲ್ಲ ಎಂದು ಹೇಳಿದ್ದಕ್ಕೆ ತಾನು ಮನನೊಂದು ಯಾವುದೋ ಒಂದು ಔಷಧಿಯನ್ನು ಸೇವಿಸಿರುತ್ತೇನೆ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ :6: ಪ್ರಾ.ಸಾ.1 ರವರು ಮುಂದುವರೆದು ಆಗ ತನ್ನ ಕುಟುಂಬದವರು ತನ್ನನ್ನು ಕೋಲಾರದ ಆರ್ ಎಲ್ ಜಾಲಪ್ಪ ಆಸ್ಪತ್ರೆಗೆ ಸೇರಿಸಿದ್ದು, ಅಲ್ಲಿಗೆ ಪೊಲೀಸರು ಬಂದು ತನ್ನನ್ನು ವಿಚಾರಿಸಿದ್ದು, ತಾನು ಪೋಲೀಸರಿಗೆ ನಿಪಿ 1 ರಂತೆ ದೂರನ್ನು ನೀಡಿ, ಘಟನಾ ಸ್ಥಳವನ್ನು ತೋರಿಸಿರುತ್ತೇನೆ, ದಿಃ17.01.2023 ರಂದು ಬೆಳಗ್ಗೆ 8 ರಿಂದ 9 ಗಂಟೆ ಸಮಯದಲ್ಲಿ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಚಾಸಾ.5 ಮತ್ತು 6 ರವರ ಸಮಕ್ಷಮ ನಿಪಿ-2 ರಂತೆ ಪಂಚನಾಮೆ ಬರೆದು ತನ್ನ ಸಹಿಯನ್ನು ಪಡೆದಿರುತ್ತಾರೆ, ನಂತರ ತಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ :7: ಪ್ರಾ.ಸಾ.2 ಎಂ.ಡಿ.ನಾರಾಯಣಪ್ಪ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಅಕ್ಟೋಬರ್ 2022 ರಿಂದ ಜುಲೈ 2024 ರವರೆಗೆ ಶ್ರೀನಿವಾಸಪುರ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿದ್ದು, ದಿಃ11.01.2023 ರಂದು ಆರ್.ಎಲ್.ಜಾಲಪ್ಪ ಆಸ್ಪತ್ರೆಯಿಂದ ತುರ್ತು ಕರೆ ಬಂದಿದ್ದು, ಅದರಂತೆ ತಾನು ತಮ್ಮ ಠಾಣೆಯ ಹೆಚ್.ಸಿ-19

ರವೀಂದ್ರರವರನ್ನು ಆಸ್ಪತ್ರೆಗೆ ಕಳುಹಿಸಿರುತ್ತೇನೆ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ :8: ಪ್ರಾ.ಸಾ.2 ರವರು ಮುಂದುವರೆದು ರವೀಂದ್ರರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚಾಸಾ–1 ರವರ ದೂರನ್ನು ದಾಖಲಿಸಿಕೊಂಡು ಠಾಣೆಗೆ ಹಾಜರಾಗಿದ್ದು, ತಾನು ಅದನ್ನು ಸ್ವೀಕರಿಸಿ ಠಾಣಾ ಗುನ್ನಾ ಸಂಃ6/2023 ರಲ್ಲಿ ಪ್ರಕರಣ ದಾಖಲಿಸಿ, ನಿಪಿ–3 ರಂತೆ ಪ್ರಥಮ ವರ್ತಮಾನ ವರದಿಯನ್ನು ಗುರುತಿಸಿಕೊಂಡು, ದಿಃ17.01.2023 ರಂದು ಚಾಸಾ–1 ರವರು ತೋರಿಸಿದ ಸ್ಥಳದಲ್ಲಿ ಚಾಸಾ–5 ಮತ್ತು 6 ರವರ ಸಮಕ್ಷಮ ಬೆಳಿಗ್ಗೆ 8 ರಿಂದ 9 ಗಂಟೆ ಸಮಯದಲ್ಲಿ ನಿಪಿ–2 ರಂತೆ ಪಂಚನಾಮೆ ಬರೆದಿರುತ್ತೇನೆ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ :9: ಪ್ರಾ.ಸಾ.2 ರವರು ಮುಂದುವರೆದು ದಿಃ14.08.2023 ರಂದು ಚಾಸಾ–1 ರವರ ಮರು ಹೇಳಿಕೆ, ಚಾಸಾ–2 ರಿಂದ 4 ರವರ ಹೇಳಿಕೆಗಳನ್ನು ದಾಖಲಿಸಿಕೊಂಡು, ಆರೋಪಿ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು ಆತನನ್ನು ವಿಚಾರಣೆಗೊಳಪಡಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿ, ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ :10: ಪ್ರಾ.ಸಾ.3 ಸರೋಜಮ್ಮ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಸುಮಾರು 11 ವರ್ಷಗಳ ಹಿಂದೆ ಚಾಸಾ–1 ಮತ್ತು ಆರೋಪಿಯು ಮದುವೆಯಾಗಿದ್ದು, 8 ವರ್ಷಗಳು ಆರೋಪಿ ಮತ್ತು ಚಾಸಾ–1 ರವರು ಸಹಜವಾಗಿ ಬಾಳ್ವೆ ಮಾಡುತ್ತಿದ್ದು, ತದನಂತರ ಒಂದು ವರ್ಷದ ಕಾಲ ಆರೋಪಿಯು ವಿನಾಕಾರಣ ಚಾಸಾ–1 ರವರ ಮೇಲೆ ಜಗಳ ತೆಗೆದು ಗಲಾಟೆ ಮಾಡುವುದು, ಕೈಯಿಂದ ಹೊಡೆಯುವುದು ಮಾಡುತ್ತಿದ್ದರು ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ :11: ಪ್ರಾ.ಸಾ.3 ರವರು ಮುಂದುವರೆದು ಆರೋಪಿಯು ಬೇರೆ ಯಾವುದೋ ಮಹಿಳೆಯೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ ಕಾರಣ ಈ ರೀತಿ ಚಾಸಾ–1 ರವರಿಗೆ

ಪೀಡಿಸುತ್ತಿದ್ದು, ಈ ಬಗ್ಗೆ ಚಾಸಾ–1ರವರು ತನಗೆ ತಿಳಿಸುತ್ತಿದ್ದು ತಾನು ಮತ್ತು ತಮ್ಮ ಕುಟುಂಬದವರೆಲ್ಲರೂ ಹಲವಾರು ಬಾರಿ ಆರೋಪಿಯ ಮನೆಗೆ ಹೋಗಿ ಆರೋಪಿಗೆ ಬುದ್ಧಿವಾದ ಹೇಳಿದ್ದೆವು ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ **:12:** ಪ್ರಾ.ಸಾ.3 ರವರು ಮುಂದುವರೆದು ಆದರೂ ಸಹಾ ಆರೋಪಿ ತಿದ್ದಿಕೊಳ್ಳದೇ ಅದೇ ರೀತಿ ಚಾಸಾ–1ರವರೊಂದಿಗೆ ಜಗಳ ಮಾಡಿ ಅವರನ್ನು ಮನೆಯಿಂದ ಹೊರ ಹಾಕಿ ತಮ್ಮ ಮನೆಯ ಮುಂದೆ ಬಿಟ್ಟು ಹೋಗಿದ್ದು, ಆದ್ದರಿಂದ ಚಾಸಾ–1 ರವರು ಮನನೊಂದು ವಿಷ ಸೇವಿಸಿದ್ದು, ಆಗ ತಾವು ಅವರನ್ನು ತುರ್ತಾಗಿ ಶ್ರೀನಿವಾಸಪುರ ಸರ್ಕಾರಿ ಆಸ್ಪತ್ರೆಗೆ ಹಾಗೂ ಹೆಚ್ಚಿನ ಚಿಕಿತ್ಸೆಗಾಗಿ ಕೋಲಾರದ ಆರ್ ಎಲ್ ಜಾಲಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು, ಈ ಬಗ್ಗೆ ತಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ **:13:** ನೀವು ಈ ಪ್ರಕರಣದಲ್ಲಿ ಏನಾದರೂ ಹೇಳುವುದಿದೆಯೇ**?**

ಉತ್ತರಃ

ಪ್ರಶ್ನೆ **:14:** ನಿಮ್ಮ ಪರವಾಗಿ ಯಾವುದಾದರೂ ಸಾಕ್ಷ್ಯಗಳನ್ನು ಹಾಜರುಪಡಿಸುವಿರೋ**?**

ಉತ್ತರಃ

**(**ಆರೋಪಿಗೆ ಮೇಲ್ಕಂಡಂತೆ ಪ್ರಶ್ನೆಗಳನ್ನು ಕೇಳಿದ್ದು, ಅವರು ನೀಡಿದ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಪ್ರಮಾಣೀಕರಿಸುತ್ತೇನೆ**)**

ದಿನಾಂಕ **: 1ನೇ ಆಗಸ್ಟ್ 2026.**

**(ಕರ್ನ ಸಿಂಗ್ ಆರ್.ಯು.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.
ಶ್ರೀನಿವಾಸಪುರ.

**ಆರೋಪಿತನ ಸಹಿಃ**